# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂ:ಕರಾಸಾ:ರಾನವಿ:ಸಂ:ವಾ: 1114 :16–17

ದಿನಾಂಕ:08.06:2016

## ಸಂಧಾನ ಪ್ರಕಟಣೆ ಸಂ:02/2016–17

ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ 05 ವರ್ಷಗಳವರೆಗೆ ಮತ್ತು ತೆರೆದ ಮಳಿಗೆ 03 ವರ್ಷಗಳವರೆಗೆ ಪರವಾನಗಿ ನೀಡಲು ಸಂಧಾನ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಬಸ್ ನಿಲ್ದಾಣದ ಹೆಸರು (ಸ್ಥಳ) | ಮಳಿಗೆಯ ಹೆಸರು/ಫಲಕಗಳ ಸಂಖ್ಯೆ ವಿವರ | ವಿಸ್ತೀರ್ಣ (ಚದರ ಅಡಿಗಳು) | ಮಿತವ್ಯಯ ಮಾಸಿಕ ಶುಲ್ಕ (ರೂ) | ಇ.ಎಂ.ಡಿ., ಮೊತ್ತ (ರೂ) | ಅರ್ಜಿ ಫಾರಂ ಶುಲ್ಕ(ರೂ) |
|---|---|---|---|---|---|---|
| 1 | ಆನೇಕಲ್ | ಜನರಲ್ ಸ್ಟಾಲ್ (ಸಂ:01) (ಮಹಡಿ ಮಳಿಗೆ) | 2836 | - | 219313/- | 1000-00 |
| 2 | ಕನಕಪುರ | ಜನರಲ್ ಸ್ಟಾಲ್ ಬೂತ್ ಸಂಖ್ಯೆ:07 (ತೆರೆದ ಸ್ಥಳ) (ಪರಿಶಿಷ್ಟ ಜಾತಿಗೆ ಮೀಸಲು) | 64 | 35992/- | 107976/- | 350-00 |

* **ಸೂಚನೆಗಳು:–**

1) ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10%ರಷ್ಟು ಹೆಚ್ಚಾಗುವುದು.
2) ಮಳಿಗೆಯಲ್ಲಿ ಸಂಸ್ಥೆಯು ನಿಗದಿಪಡಿಸಿರುವ ಜನರಲ್ ಸ್ಟಾಲ್‌ಗೆ ಸಂಬಂಧಿಸಿದಂತೆ ವ್ಯಾಪಾರವನ್ನು ಮಾಡಲು ಮಾತ್ರ ಅವಕಾಶವಿರುತ್ತದೆ.
3) ಕ್ರಮ ಸಂ:02ರ ಕನಕಪುರ ಬಸ್ ನಿಲ್ದಾಣದ ಜನರಲ್ ಸ್ಟಾಲ್ ಬೂತ್ (ಸಂಖ್ಯೆ.07), ಮಳಿಗೆಯನ್ನು ಪರಿಶಿಷ್ಟ ಜಾತಿಗೆ ಮೀಸಲಾಗಿರಿಸಿದ್ದು, ಪರಿಶಿಷ್ಟ ಪರಿಶಿಷ್ಟ ಜಾತಿಗೆ ಸೇರಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಸೂಕ್ತಾಧಿಕಾರಿಯವರಿಂದ ಇತ್ತೀಚಿಗೆ ಪಡೆದ ದೃಡೀಕರಣದ ಪತ್ರದ ಪ್ರತಿಯನ್ನು ಸಂಧಾನದ ಅವಧಿಯಲ್ಲಿ ಸಂಧಾನದ ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುತ್ತದೆ.
4) ಸಂಧಾನ ಸಭೆಯಲ್ಲಿ ಭಾಗವಹಿಸುವ ಆಸಕ್ತರು ಇಎಂಡಿ ಹಣದ ಮೂಲ ಡಿಡಿಯನ್ನು ಸಂಧಾನ ಅರ್ಜಿಯ ಜೊತೆಯಲ್ಲಿ ಸಲ್ಲಿಸತಕ್ಕದ್ದು, ಸಂಧಾನವನ್ನು ಟೆಂಡರುದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಸಲಾಗುವುದು.
5) ವಿವರವಾದ ಸಂಸ್ಥೆಯ ನಿಯಮ & ನಿಬಂಧನೆಗಳನ್ನು ಸಂಧಾನ ಅರ್ಜಿಯ ಜೊತೆಯಲ್ಲಿ ನೀಡಲಾಗುವುದು.
6) ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡುವುದು.
7) ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಆಕ್ಟ್ ನಂ:8/2003ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.
8) ಆಯ್ಕೆ ಆದ ಪರವಾನಿಗೆದಾರರು ತಾವು ಸಲ್ಲಿಸಿರುವ ಇಎಮ್‌ಡಿ. ಹಣವನ್ನು ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಗಿ ಶುಲ್ಕದ 6ರಷ್ಟು ಹಣವನ್ನು ಭದ್ರತಾ ಠೇವಣಿ ಹಣವನ್ನು ಡಿ.ಡಿ.ರೂಪದಲ್ಲಿ "<u>ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ರಾಮನಗರ ವಿಭಾಗ</u>" ಇವರ ಹೆಸರಿನಲ್ಲಿ ಪಾವತಿಸುವುದು ಹಾಗೂ ಮೂರು ತಿಂಗಳ ಹೆಚ್ಚುವರಿ ಭದ್ರತಾ ಠೇವಣಿ ಹಣವನ್ನು ಮೂರನೇ ವರ್ಷದ ಪರವಾನಗಿ ಅವಧಿ ಮುಕ್ತಾಯಕ್ಕಿಂತ ಮುಂಚಿತವಾಗಿ ಪಾವತಿಸುವುದು.
9) ಡಿ.ಡಿ.ಯನ್ನು "**ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ರಾಮನಗರ ವಿಭಾಗ**" ಇವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ನಿಂದ ಪಡೆದು ಸಲ್ಲಿಸುವುದು.
10) ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಪ್ರಸ್ತುತ ಶೇ.15.00%ರಷ್ಟು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು. (ಕೇಂದ್ರ ಮತ್ತು ಕರ್ನಾಟಕ ಸರ್ಕಾರ ಆಗಿಂದಾಗ್ಗೆ ನಿಗಧಿಪಡಿಸುವ ಸೇವಾ ತೆರಿಗೆ ಶುಲ್ಕವನ್ನು ಸಂದಾಯ ಮಾಡಲು ಬದ್ಧರಾಗಿರಬೇಕು) ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
11) ಶಾಶ್ವತ ವಾಣಿಜ್ಯ ಮಳಿಗೆಗಳನ್ನು ಯಾವ ಸ್ಥಿತಿಯಲ್ಲಿವೆಯೊ ಹಾಗೆಯೇ ನೀಡಲಾಗುವುದು.
12) ಸಂಸ್ಥೆಯು ಆಗಿಂದಾಗ್ಗೆ ವಿಧಿಸುವ ಷರತ್/ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
13) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.
14) ಸಂಸ್ಥೆಯ ಕಪ್ಪು ಪಟ್ಟಿಯ ವ್ಯಾಪ್ತಿಯಲ್ಲಿ ಬರುವ ವ್ಯಕ್ತಿಗಳು ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ.
15) ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
16) ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.
17) ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.
18) ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ:ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.
19) ಆಯ್ಕೆಗೊಂಡ ಪರವಾನಗಿದಾರರು ನಿಗಮದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.
20) ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆ ತಿಂಗಳ 07ನೇ ತಾರೀಖಿನೊಳಗೆ ಮತ್ತು ಸೇವಾ ತೆರಿಗೆ ಶುಲ್ಕವನ್ನು ಆ ತಿಂಗಳ 05ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.
21) ಆಯ್ಕೆಗೊಂಡ ಪರವಾನಗಿದಾರರು ನಿಗಮದ ನಿಯಮಾವಳಿಯ ಪ್ರಕಾರ ಸೂಚಿಸಿರುವ ಪರವಾನಗಿ ಶುಲ್ಕದ 6ರಷ್ಟು ಹಣವನ್ನು ಭದ್ರತಾ ಠೇವಣಿ ಹಣ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಮೂರು ದಿನಗಳೊಳಗೆವಿಭಾಗೀಯ ಕಛೇರಿಯಲ್ಲಿ ಸಂದಾಯ ಮಾಡಿ ನಿಗಮದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಬದ್ಧರಾಗಿರಬೇಕು . ನಿಗದಿತ ಅವಧಿಯಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ತಾತ್ಕಾಲಿಕ ಪರವಾನಗಿ ಆಯ್ಕೆಯನ್ನು ರದ್ದುಪಡಿಸಿ ತಾವು ಸಲ್ಲಿಸಿರುವ ಇಎಂಡಿ., ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು.

ಮುಂದುವರೆದಂತೆ–2

22) ಸಂಧಾನದಲ್ಲಿ ಭಾಗವಹಿಸುವ ಅರ್ಜಿದಾರರು ವಿಳಾಸದ ಮೂಲ ಪ್ರತಿಯನ್ನು ಸಲ್ಲಿಸಬೇಕು. (ಆಧಾರ ಕಾರ್ಡ್, ರೇಷನ್ ಕಾರ್ಡ್, ಚುನವಾಣಿ ಗುರುತ್ತಿನ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದರ ಮೂಲ ಪ್ರತಿ)
23) ಬಾಲ ಕಾರ್ಮಿಕರನ್ನು ನೇವಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
24) ಮಳಿಗೆಗಳನ್ನು ಉಪಯೋಗಿಸುವ ಉದ್ದೇಶವನ್ನು ಸಂಧಾನ ಅರ್ಜಿಯಲ್ಲಿ ನಮೂದಿಸಬೇಕು. ಯಾವುದೇ ಕಾರಣಕ್ಕೂ ಸಂಧಾನ ಅರ್ಜಿಯಲ್ಲಿ ಸೂಚಿಸಿರುವ ವ್ಯಾಪಾರವನ್ನು ಮಾಡಲು ಮಾತ್ರ ಅವಕಾಶವಿರುತ್ತದೆ.

ಮೇಲೆ ತಿಳಿಸಿರುವ ಮಳಿಗೆಗಳಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಚೆಯುಳ್ಳವರು ಸಂಧಾನ ಅರ್ಜಿಗಳನ್ನು ನಿಗದಿಪಡಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಜೊತೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಿಗದಿತ ಅರ್ಜಿ ಶುಲ್ಕವನ್ನು ನಗದು ಅಥವಾ ಡಿ.ಡಿ.ರೂಪದಲ್ಲಿ " ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ರಾಮನಗರ ವಿಭಾಗ " ಇವರ ಹೆಸರಿನಲ್ಲಿ ಸಲ್ಲಿಸಿ, ಸಂಧಾನ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಅಂದರೆ ದಿ:09.06.2016 ರಿಂದ ದಿನಾಂಕ:01.07.2016ರ 1100 ಗಂಟೆಗಳವರೆಗೆ ತೆಗೆದು ಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಸಂಧಾನ ಅರ್ಜಿಗಳನ್ನು ದಿನಾಂಕ:01.07.2016ರಂದು 1145 ಗಂಟೆಯವರೆಗೆ ಸ್ವೀಕರಿಸಲಾಗುವುದು. ದಿ:01.07.2016 ರಂದು 1145 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರು ಸಂಧಾನವನ್ನು ಮಾಡಲಾಗುವುದು.

ಮಳಿಗೆಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ನಿಯಮಾವಳಿಗಳನ್ನು ಅರ್ಜಿಯ ಜೊತೆ ಪ್ರತ್ಯೇಕವಾಗಿ ನೀಡಲಾಗುವುದು. ಸಂಧಾನವನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ:ರಾಮನಗರ

ಪ್ರತಿಯನ್ನು ಗೌರವಪೂರ್ವಕವಾಗಿ:-

1) ನಿರ್ದೇಶಕರು (ಭ : ಜಾ), ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
2) ನಿರ್ದೇಶಕರು (ಕಾ), ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3) ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
4) ವ್ಯವಸ್ಥಾಪಕರ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ/ವಾಕರಾರಸಾಸಂಸ್ಥೆ/ಈಕರಾರಸಾಸಂಸ್ಥೆ, ರವರ ಮಾಹಿತಿಗಾಗಿ.
5) ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ.
6) ವಿಭಾಗ ಸಂಚಾಲನಾಧಿಕಾರಿ/ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ರಾಮನಗರ ವಿಭಾಗ:ರಾಮನಗರ ರವರ ಮಾಹಿತಿಗಾಗಿ .
7) ಘಟಕ ವ್ಯವಸ್ಥಾಪಕರು (ಕನಕಪುರ:ಅನೇಕಲ್:ಚನ್ನಪಟ್ಟಣ:ಹಾರೋಹಳ್ಳಿ:ರಾಮನಗರ:ಮಾಗಡಿ) ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಹಾಕಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ: ರಾಮನಗರ